ಆದರೆ, ಶೇಕಡ 75ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ 20 ಗಂಟೆಗಳ ಅವಧಿಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಯಿತು. ಉಳಿದ ಶೇಕಡ 25 ರಷ್ಟು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಉಪ ಕೇಂದ್ರಗಳಲ್ಲಿನ ಕೆಲವು ತಾಂತ್ರಿಕ ಅಡತಡೆಗಳಿಂದಾಗಿ 20 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಅದಾಗ್ಯೂ ಆಶ್ವಾಸಿಸಿದಂತೆ. ಆಗಸ್ಟ್–2004 ರವರೆಗೆ ವಿದ್ಯುತ್ ಸರಬರಾಜು ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಆ) ಮತ್ತು ಇ)

2004–05ರ ವರ್ಷದಲ್ಲಿ ಅನಿರ್ಬಂಧಿತ ವಿದ್ಯುತ್ ಬೇಡಿಕೆಯ ಪ್ರಮಾಣವಾದ 39000 ದಶಲಕ್ಷ ಯೂನಿಟ್‌ಗಳಿಗೆ ಹೋಲಿಸಿದಲ್ಲಿ ನಿರೀಕ್ಷಿತ ವಿದ್ಯುತ್ ಲಭ್ಯತೆಯ ಪ್ರಮಾಣ 33785 ದಶಲಕ್ಷ ಯೂನಿಟ್ಟುಗಳು. ಹೀಗಾಗಿ 5215 ದಶಲಕ್ಷ ಯೂನಿಟ್ಟುಗಳಷ್ಟು ಕೊರತೆ ಇದೆ. ಇಷ್ಟು ಪ್ರಮಾಣದ ವಿದ್ಯುತ್ ಖರೀದಿಗೆ ತಗಲುವ ಅಧಿಕ ಹೊರೆಯ ಮೌಲ್ಯ ಸುಮಾರು 1095 ಕೋಟಿ. ರೂ.ಗಳು.

ಜಲ ವಿದ್ಯುತ್ ಕೇಂದ್ರಗಳ ಜಲಾಶಯಗಳಿಗೆ ಹರಿದು ಬರುತ್ತಿರುವ ಒಳಹರಿವಿನ ಪ್ರಮಾಣವೂ ಸಹ ಈಗ ಕಡಿಮೆಯಾಗುತ್ತಿದ್ದು, ದಿನಾಂಕ: 17.7.2004ರಲ್ಲಿದ್ದಂತೆ ಜಲ ವಿದ್ಯುತ್ ಲಭ್ಯತೆ 2442 ದಶಲಕ್ಷ ಯೂನಿಟ್‌ಗಳು ಮಾತ್ರ ಆಗಿದೆ. ಅಲ್ಲದೆ, ಸುಮಾರು ಶೇಕಡಾ 25ರಷ್ಟು ಪ್ರದೇಶದಲ್ಲಿ ಕೆಲವು ವಿದ್ಯುತ್ ಉಪ ಕೇಂದ್ರಗಳಲ್ಲಿ ತಾಂತ್ರಿಕ ಅಡತಡೆಗಳು ಸಹಾ ಇವೆ. ಈ ಹಿನ್ನೆಲೆಯಲ್ಲಿ ಆಗಸ್ಟ್ 2004 ನಂತರದಲ್ಲಿ ದಿನವಹಿ 24 ಗಂಟೆಗಳ ನಿರಂತರ ವಿದ್ಯುತ್ ಸರಬರಾಜನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸ್ಥೆಗೊಳಿಸಲು ಸಾಧ್ಯವಾಗುತ್ತಿಲ್ಲ.

....

140 (52) : ಶ್ರೀ ಪ್ರಭಾಕರ ಬಂಗೇರ .ಕೆ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಕಾಜೂರು ನಿವಾಸಿಗರಿಗೆ ವಿಶೇಷತಃ ಮಳೆಗಾಲದಲ್ಲಿ ರಸ್ತೆ ಸಂಪರ್ಕವಿಲ್ಲದೇ ತೆಪ್ಪಗಳ ಮೂಲಕ ಮಾತ್ರ ಸಂಚಾರ ಮಾಡಬೇಕಾದ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರ ಗಮನಿಸಿದೆಯೇ;

ಆ) ಕಾಜೂರು ಮೂಲಕ ದಿಡುಪೆವರೆಗೆ ವಾಹನಗಳು ಓಡಾಡುತ್ತಿದ್ದರೂ ಮಳೆಗಾಲದಲ್ಲಿ ಕಚ್ಚಾ ರಸ್ತೆಯ ಕಾರಣ ವಾಹನ ಸಂಚಾರವಿಲ್ಲದದಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಸರ್ಕಾರದವರು ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು;

ಈ) ಸಂಪರ್ಕ ದಾರಿಯಲ್ಲಿ ಬರುವ ನೇತ್ರಾವತಿ ನದಿ ದಾಟಲು ಸರ್ಕಾರದವರು ಮಾಡಿರುವ ವ್ಯವಸ್ಥೆಗಳೇನು;

ಉ) ಕಿಲ್ಲೂರು, ಕಾಜೂರು, ಕೊಲ್ಲಿ, ಕುಕ್ಕಾವು, ಡಿಡುಪೆ (ಅಡ್ಯ) ಕೊಪ್ಪದ ಪೈಲು ಮುಂತಾದ ಊರುಗಳಿಗೆ ತಲುಪಲು 15 ಕಿಮೀ.ಗಳಷ್ಟು ಅಗಲವಿರುವ ನೇತ್ರಾವತಿ ನದಿಗೆ ಸೇತುವೆ ಅಥವಾ ಇನ್ನಿತರ ವ್ಯವಸ್ಥೆಯನ್ನು ಮಾಡಿ ಕೊಡಲು ಸರ್ಕಾರ ತುರ್ತು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಆ) ಭಾರಿ ಮಳೆ ಬಂದಿದ್ದಲ್ಲಿ ಕೆಲವು ಸಮಯ ವಾಹನಗಳ ಸಂಚಾರಕ್ಕೆ ತೊಂದರೆಯಾಗುವುದು ಗಮನಕ್ಕೆ ಬಂದಿರುತ್ತದೆ.

ಇ) ಈ) ಉ)

ಸೇತುವೆಯನ್ನು ನಿರ್ಮಿಸಲು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಯಾವುದಾದರೂ ಯೋಜನೆಯಡಿ ನಿರ್ಮಾಣ ಕ್ರಮವನ್ನು ಕೈಗೊಳ್ಳಲಾಗುವುದು.

....

141 (125) : ಶ್ರೀ ಪ್ರಭಾಕರ ಬಂಗೇರ .ಕೆ (ಬೆಳ್ತಂಗಡಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಮತ್ತು ವಿಶ್ವ ಬ್ಯಾಂಕಿನ ಸುಜಲ ಜಲಾನಯನ ಅಭಿವೃದ್ಧಿ ಯೋಜನೆಗಳ ವಿವರಗಳೇನು;

ಆ) ಸುಜಲ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ವಿಶ್ವ ಬ್ಯಾಂಕಿನಿಂದ ಪಡೆದ ನೆರವಿನ ಮೊತ್ತ ಎಷ್ಟು;

ಇ) ಅದನ್ನು ಯಾವ ಯೋಜನೆಗಳಿಗೆ ವಿನಿಯೋಗಿಸಲು ಉದ್ದೇಶಿಸಲಾಗಿದೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 677.73 ಕೋಟಿ ರೂ.ಗಳ ವಿಶ್ವ ಬ್ಯಾಂಕಿನ ನೆರವಿನ ಸುಜಲ ಜಲಾನಯನ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ಚಿತ್ರದುರ್ಗ, ಧಾರವಾಡ, ಹಾವೇರಿ, ಕೋಲಾರ ಮತ್ತು ತುಮಕೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ 38 ತಾಲ್ಲೂಕುಗಳಲ್ಲಿ ಹರಡಿರುವ 1270 ಗ್ರಾಮಗಳ 508626 ಹೆಕ್ಟೇರು ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯ ಅವಧಿಯು 2001 ರಿಂದ 2007 ರ ವರೆಗೆ ಐದುವರೆ ವರ್ಷಗಳಾಗಿರುತ್ತದೆ.

ಆ) ವಿಶ್ವ ಬ್ಯಾಂಕಿನಿಂದ ಈವರೆಗೆ 2771.01 ಲಕ್ಷ ರೂ.ಗಳನ್ನು ಪಡೆಯಲಾಗಿದೆ.

ಇ) ಈ ಎಲ್ಲಾ ಹಣವನ್ನು ಸುಜಲಾ ಯೋಜನೆಗಾಗಿ ಮಾತ್ರ ಬಳಸಲು ಉದ್ದೇಶಿಸಲಾಗಿದೆ.

....

142 (355) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷದಲ್ಲಿ ಬೀದರ್ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿ ತಗ್ಗು ಗುಂಡಿಗಳು ಹೆಚ್ಚಾಗಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಷ್ಟು ದೊಡ್ಡ ಪ್ರಮಾಣದಲ್ಲಿ ಬಿದ್ದುರುವ ತಗ್ಗು ಗುಂಡಿಗಳನ್ನು ಮುಚ್ಚದೆ ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಬೀದರ್ ಜಿಲ್ಲೆಯ ತಾಲ್ಲೂಕಿನಿಂದ ತಾಲ್ಲೂಕಿಗೆ ಜೋಡಿಸುವ ರಸ್ತೆಗಳ ಅಭಿವೃದ್ಧಿ ಕೆಲಸ ತೆಗೆದುಕೊಳ್ಳದೆ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಈ) ಗಮನದಲ್ಲಿದ್ದರೆ, ಇದಕ್ಕೆ ಕಾರಣವೇನು ಮತ್ತು ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?